ಮಾತ್ರ. ಅಲ್ಲಿ, ಆ ಆಸ್ತಿಯು ಅವ್ಯಕ್ತ ನಿಧಿಯಾಗಿ ಅಡಗಿ ಮುಂದೆ ಬರಬಹುದಾದ ಕನ್ನಡದ ಹೊಸ ಜವಾಬ್ದಾರಿಯುತ ನಾಡಿಗರಿಗಾಗಿ ಕಾಯುತ್ತಿದೆ' ಎಂದು ಗುರ್ತಿಸುವಾಗಲೂ ಹಳೆಗಾಲದ ಮುಂದೆ ಹೊಸಗಾಲದ ಸಮಸ್ಯೆಯನ್ನು ಹೂಡಿ ನೋಡುವ ಪ್ರಯತ್ನವೇ ಇದೆ. ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಆಡಿದ ಭಾಷಣದ ಈ ಅಕ್ಷರ ರೂಪ, ಇಂದಿನ ನುಡಿ ಎದುರಿಸುತ್ತಿರುವ ಸವಾಲುಗಳನ್ನು, ಭಾವುಕತೆಯ ಪರದೆ ಬಿಡಿಸಿ ವಾಸ್ತವದ ಸುಡುಬಿಸಿಲಲ್ಲಿಟ್ಟು ಪರೀಕ್ಷಿಸುತ್ತದೆ.

ತಾನು ಈ ವಿಶಾಲವಾದ ಜಗತ್ತಿನ ಭಾಗವೇ ಆಗಿರುವುದರಿಂದ, ಈ ಜಗದ ವಿದ್ಯಮಾನಗಳೆಲ್ಲವೂ ನನ್ನ ವೈಯಕ್ತಿಕ ಬದುಕಿನ ಭಾಗವೂ ಹೌದು ಎಂಬ ಭಾವವೊಂದು ಅಕ್ಷರ ಅವರ ಬರಹಗಳಲ್ಲಿ ಎದ್ದು ಕಾಣುವ ಇನ್ನೊಂದು ಅಂಶ. ಹಾಗಾಗಿಯೇ ದರ್ಶನವಾಗಲಿ, ಸಮಕಾಲೀನ ಸಮಸ್ಯೆಯೇ ಆಗಲಿ ಅವರು ಅದನ್ನು ನೋಡುವುದು–ಅರ್ಥಮಾಡಿಕೊಳ್ಳಲು ಯತ್ನಿಸುವುದು ತಮ್ಮ ಸುತ್ತಮುತ್ತಲಿನ ಪರಿಕರಗಳಿಂದಲೇ.

ಅವರು ಈ ಎಲ್ಲವನ್ನೂ ಕಟ್ಟುತ್ತಿರುವ 'ಕನ್ನಡ'ವೂ ಅಂಥದ್ದೇ ಒಂದು ಖಾಸಗಿಯಾದದ್ದೇ ಆಗಿದೆ ಎಂಬುದನ್ನು ಗಮನಿಸಬೇಕು. ಅದು ಉಪದೇಶದ ಧ್ವನಿಯಲ್ಲ, ಅದಕ್ಕೆ ಜಡ್ಜ್‌ಮೆಂಟು ಕೊಡುವ ಹಮ್ಮಿಲ್ಲ, ಖಾಸಗಿ ಮಾತುಕತೆಯೊಂದರಲ್ಲಿ ತನ್ನ ಮನಸಲ್ಲಿ ಹೊಳೆದಿದ್ದನ್ನು ಪಕ್ಕ ಕೂತ ಸಮಾನ ಮನಸ್ಕನೊಂದಿಗೆ ಹಂಚಿಕೊಳ್ಳುವ ಆಪ್ತಭಾವ ಅದಕ್ಕಿದೆ. ಅದು ನಿರ್ಭಾವುಕವಾದದ್ದಲ್ಲ, ಸ್ವಾರಸ್ಯವನ್ನು ಹುಟ್ಟಿಸುವ ನಾಟಕೀಯತೆಯಲ್ಲಿ ಮೈದಳೆದ ಕನ್ನಡ ಅವರದ್ದು. ಹಾಗಾಗಿಯೇ ಇಲ್ಲಿನ ಎಲ್ಲ ಲೇಖನಗಳಲ್ಲಿಯೂ ಒಂದು ಅಥವಾ ಹಲವು ಕಥನಗಳಿರುತ್ತವೆ. ಕಥನಸ್ವಾರಸ್ಯವಿರುತ್ತದೆ. ಭಾಷೆಯ ಮೂಲಕವೇ ಅವರು 'ಆಕ್ಟ್' ಮಾಡುತ್ತಿರುತ್ತಾರೆ.

ಇಲ್ಲಿನ ಲೇಖನಗಳಲ್ಲಿ ಅವರು ನಡೆಸುತ್ತಿರುವ ಹುಡುಕಾಟಕ್ಕೂ, ಅದಕ್ಕೆ ಅವರು ಬಳಸಿಕೊಳ್ಳುತ್ತಿರುವ ಭಾಷೆಯೂ ಎರಡಲ್ಲದಿರುವುದು ಖಂಡಿತ ಆಕಸ್ಮಿಕವಲ್ಲ.

ಈ ಪುಸ್ತಕದ ಬಹುಮುಖ್ಯ ಲೇಖನ 'ಗಾಂಧಿಯ ಗುರಿಗೆ ಧರಮ್‌ಪಾಲ್ ದಾರಿಗಳು'. ಈವತ್ತು ನಾವು ಗಾಂಧೀಜಿಯವರನ್ನು ಗ್ರಹಿಸುವಲ್ಲಿ ಇರುವ ಬಿಕ್ಕಟ್ಟುಗಳ ಚರ್ಚೆಯೊಂದಿಗೆ ಆರಂಭವಾಗುವ ಈ ಲೇಖನ, ಅವೇ ನಮ್ಮ ವರ್ತಮಾನದ ಹಲವು ಬಿಕ್ಕಟ್ಟುಗಳಿಗೆ ಮೂಲವೂ ಆಗಿದೆ ಎಂಬುದನ್ನು ಸೂಚಿಸುತ್ತದೆ. ಅವಾಸ್ತವ ಆದರ್ಶ ಎಂದು ಪಕ್ಕಕ್ಕಿಟ್ಟಿರುವ ಗಾಂಧೀಜಿ ಪರಿಕಲ್ಪನೆಗಳು ಐತಿಹಾಸಿಕ ಸತ್ಯಗಳು ಎಂಬುದನ್ನು ದಾಖಲೆ ಸಮೇತ ನಿರೂಪಿಸುವ ಧರಮ್‌ಪಾಲ್ ಅವರ ಕೃತಿಗಳ ಕುರಿತು ಚರ್ಚಿಸುತ್ತವೆ. ಭಾರತದಲ್ಲಿ ಬೇರುಬಿಟ್ಟು ಬೆಳೆದಿದ್ದ ಶಿಕ್ಷಣವೆಂಬ ವೃಕ್ಷವನ್ನು ಬ್ರಿಟಿಷ್ ವ್ಯವಸ್ಥೆ ಹೇಗೆ ವ್ಯವಸ್ಥಿತವಾಗಿ ಸಾಯಿಸಿತು ಎಂಬುದರ ಕುರಿತು ಗಮನಸೆಳೆಯುತ್ತದೆ.

'ಹಿಂದೆ ಏನಿತ್ತು ಮತ್ತು ಅದು ಹೇಗೆ ರೂಪುಗೊಂಡಿತ್ತು ಎಂಬುದರ ತಿಳಿವಳಿಕೆಯನ್ನು ಮತ್ತು ಇವತ್ತು ನಾವು ತಂದು ಕೂರಿಸಿಕೊಂಡಿರುವ ವ್ಯವಸ್ಥೆಯ ಅನುಪಯುಕ್ತತೆಯನ್ನೂ ಜೊತೆಗಿಟ್ಟು ನೋಡಿದರೆ, ನಮ್ಮ ಇವತ್ತಿನ ಅಗತ್ಯಗಳಿಗೂ ಮತ್ತು ಈ ನಾಡಿನ ಜನರ ಮನೋಧರ್ಮಕ್ಕೂ ಹೊಂದುವ ಒಂದು ಶಿಕ್ಷಣವ್ಯವಸ್ಥೆಯ ಹೊಳಹು ಹುಟ್ಟುವುದಕ್ಕೆ ಸಹಾಯವಾದೀತು' – ಧರಮ್‌ಪಾಲ್ ಅವರ 'ದಿ ಬ್ಯೂಟಿಫುಲ್ ಟ್ರೀ' ಪುಸ್ತಕದಿಂದ ಉಲ್ಲೇಖಿಸಲಾದ ಈ ಮಾತುಗಳು ಅಕ್ಷರ ಅವರ ಒಟ್ಟಾರೆ ಹುಡುಕಾಟವನ್ನೂ ವ್ಯಾಖ್ಯಾನಿಸುವಂತಿದೆ.

ಸದ್ಯದ 'ಸ್ಟೇಟಸ್', 'ಕಮೆಂಟ್'ಗಳ ಮಾರಾಮಾರಿಯಲ್ಲಿಮುಳುಗಿಹೋಗಿರುವತಲೆಮಾರಿನ ನಮಗೆ ಅಕ್ಷರ ಅವರ ದಾರಿ ಅಪ್ರಸ್ತುತವಾಗಿಯೂ, ಅಸಾಧ್ಯವೂ ಆದ ಕನಸಂತೆ ಕಾಣಿಸುವುದರಲ್ಲಿ ಸಂದೇಹವಿಲ್ಲ. ಆದರೆ, ಪಂಥಗಳಲ್ಲಿ ಒಡೆದುಕೊಂಡು ಕಣ್ಣಿಗೆ ಕಂಡಿದ್ದೆಲ್ಲವನ್ನೂ ಧ್ವಂಸಗೊಳಿಸುವುದನ್ನೇ ಚಾಳಿಯಾಗಿಸಿಕೊಂಡಿರುವ ನಮ್ಮ ಕಾಲಕ್ಕೆ, ಆರೋಗ್ಯಕರವಾದ ಕನಸನ್ನು ಕಾಣಲು ಸಾಧ್ಯವಿರುವ ದಾರಿ ಅಗತ್ಯವಾದುದೇ ಅಲ್ಲವೇ? ಅಷ್ಟಕ್ಕೂ ಧರಮ್‌ಪಾಲ್ ಹೇಳಿದಂತೆ ಅನುಪಯುಕ್ತವಾದದ್ದನ್ನು ತ್ಯಜಿಸಿ, ಉಪಯುಕ್ತವಾದದ್ದನ್ನು ಪಡೆದುಕೊಳ್ಳುವ ಆಯ್ಕೆಯಂತೂ ನಮ್ಮ ಮುಂದೆ ಇದ್ದೇ ಇದೆ. ಆದರೆ ಅಂಥ ಆಯ್ಕೆಗೆ 'ವಿವೇಕ'ವೆಂಬ ಸಾಧನವನ್ನು ನಾವು ಹರಿತಮಾಡಿಕೊಳ್ಳಬೇಕಷ್ಟೆ.

●